# ಕನಸುಗಳ ಚುಂಗು ಹಿಡಿದು ಮನೋವಿಹಾರ



ಸಮುದ್ರದ ಕಡೆಯಿಂದ ತಣ್ಣನೆಯ ಗಾಳಿ ಬೀಸಿ ಬರುತ್ತಿತ್ತು. ಎಲಿಫೆಂಟಾ ಗುಹೆಗಳ ಕಡೆಯಿಂದ ಒಂದರ ಹಿಂದೊಂದು ಬೋಟುಗಳು ಬರುತ್ತಿದ್ದವು. ಎದುರಿಗೆ ಇದ್ದ ತಾಜ್ ಹೋಟೆಲ್ ನಿಯಾನ್ ದೀಪಗಳಿಂದ ಝಗಮಗಿಸುತ್ತಿತ್ತು. ಜನವೋ ಜನ. ಗಜಿಬಿಜಿ, ಗಲಾಟೆ. ಪ್ರತಿಯೊಬ್ಬರೂ ತಮ್ಮದೇ ಜಗತ್ತಿನಲ್ಲಿ ಮೈ ಮರೆತಿದ್ದರು. ಸೋನಾಲಾಲ್ ಗಲಿಬಿಲಿಗೊಂಡಿದ್ದ. ಅಂಥ ಜನಸಂದಣಿಯಲ್ಲಿ ಅವಳು ಎಲ್ಲಿದ್ದಾಳೋ? ಕೂಗಿದ ತಕ್ಷಣ ಎಲ್ಲಿಂದ ಪ್ರತ್ಯಕ್ಷವಾಗುತ್ತಾಳೆ? ತನಗೆ ಸುಳ್ಳು ಹೇಳಿರಬಹುದೆ ಅವಳು? ಗೊಂದಲದಲ್ಲಿ ಬಿದ್ದ ಸೋನಾಲಾಲನಿಗೆ ತಾತ ಗುನ್ನಾಲಾಲ್ ಊರ್ಮಿಳಾಳನ್ನು ಹೆಸರು ಹಿಡಿದು ಕೂಗಿ ಕರೆಯಲು ಹೇಳಿದ್ದ. ಸೋನಾಲಾಲ್ ಜೋರಾಗಿ 'ಊರ್ಮಿಳಾ ಮೈ ಡಿಯರ್ ಊರ್ಮಿಳಾ' ಎಂದು ಕೂಗಿದ್ದ. ಗೇಟ್ ವೇ ಆಫ್ ಇಂಡಿಯಾ ಬಳಿ ಇದ್ದವರೆಲ್ಲಾ ಆಶ್ಚರ್ಯದಿಂದ ಇವನ ಕಡೆಗೆ ನೋಡಿದ್ದರು. ಅಷ್ಟರಲ್ಲಿ ಸಮುದ್ರದ ಕಡೆಯಿಂದ ಹತ್ತಿಯಂಥ ಹಿಮ ಹರಡಿಕೊಳ್ಳುತ್ತದೆ. ಅಲ್ಲಿದ್ದ ಜನರೆಲ್ಲಾ ಕರಗಿ ಮಾಯವಾಗುತ್ತಾರೆ. ಬೆಳದಿಂಗಳಿನಂಥ ನಿಶ್ಶಬ್ದ ಆವರಿಸಿಕೊಳ್ಳುವುದರ ಜೊತೆಗೆ ತೆಳ್ಳನೆಯ ಸುಮಧುರ ಸಂಗೀತ ಹರಿದು ಬರುತ್ತದೆ. ಹಿಮದ ತೆರೆಯನ್ನು ತನ್ನ ಸುಕೋಮಲ ಕೈಗಳಿಂದ ಸರಿಸುತ್ತಾ ಸುಂದರಿಯೊಬ್ಬಳು ನಡೆದು ಬರುತ್ತಾಳೆ ನಗುವಿನ ನಯಾಗರವನ್ನೇ ಹೊತ್ತು. ಹೌದು, ಅವಳೇ ಊರ್ಮಿಳಾ. ಸಂಭ್ರಮ ನೆಲೆಗೊಳ್ಳುತ್ತದೆ ಸೋನಾನ ಮುಖದಲ್ಲಿ.

'ನೀನು ಬರುವುದಿಲ್ಲವೆಂದುಕೊಂಡಿದ್ದೆ. ನನ್ನ ಹೃದಯವನ್ನು ಕದ್ದುಕೊಂಡು ಹೋದ ನೀನು ಬರದಿದ್ದರೆ ಏನು ಮಾಡುವುದೆಂದು ಭಯಗೊಂಡಿದ್ದೆ' ಮೆಲ್ಲನೆ ಹೇಳುತ್ತಾನೆ ಸೋನಾಲಾಲ್ ನಾಚುತ್ತಾ.

'ನಾ ಬಯಸಿದ ಗುಲಾಬಿಯನ್ನು ನೀನು ಹಿಡಿದು ಬರುತ್ತೀಯೋ ಇಲ್ಲವೋ ಎಂದು ನಾನೂ ಅನುಮಾನಪಟ್ಟಿದ್ದೆ' ಎಂದು ನಕ್ಕು ಊರ್ಮಿಳಾ ಉಲಿಯುತ್ತಾಳೆ.

'ನಾನು ಸೋನಾಲಾಲ್, ಮಫತ್ಲಾಲ್ ಗುನ್ನಾಲಾಲನ ಮೊಮ್ಮಗ. ನಾನೆಂದೂ ಮಾತಿಗೆ ತಪ್ಪುವವನಲ್ಲ' ಒಂದಿಷ್ಟು ಜಂಭ ತುಂಬಿಕೊಂಡು ಹೇಳುತ್ತಾನೆ ಸೋನಾಲಾಲ್. ಮೊಮ್ಮಗನ ಮಾತು ಕೇಳಿ ಗೇಟ್ ವೇ ಗೋಡೆಯ ಮರೆಯಲ್ಲಿ ನಿಂತಿದ್ದ ಮಫತ್ಲಾಲ್ ಗುನ್ನಾಲಾಲನಿಗೆ ಹೆಮ್ಮೆಯೆನಿಸುತ್ತದೆ.

'ಸೋ ನೈಸ್, ನಾನು ನಿನ್ನ ಮನಸ್ಸು, ಹೃದಯ ಎರಡನ್ನೂ ಕದ್ದವಳು. ನಿನಗಿಂತ ನಾನೇನು ಕಮ್ಮಿಯಿಲ್ಲ. ಮಾಡುತ್ತೀಯ ಈಗ ನನ್ನೊಂದಿಗೆ ಡ್ಯಾನ್ಸ್' ಅವಳೂ ಜಂಭ ತುಂಬಿಕೊಂಡು ಹೇಳುತ್ತಾಳೆ. 'ರೆಡಿಯಿದ್ದೇನೆ ನಾನು' ಉತ್ಸಾಹ ತುಂಬಿಕೊಂಡು ಉತ್ತರಿಸುತ್ತಾನೆ.

'ಅಂದು ನಾನು ಕೇಳಿದ ಗುಲಾಬಿಯನ್ನು ತಂದಿರುವೆಯೇನು' ಎಸೆಯುತ್ತಾಳೆ ಮನದ ಮೋಹದ ಬೇಡಿಕೆಯನ್ನ.

'ಓಹ್! ತಂದಿರುವೆ ನೀನು ಎಂದೂ ನೋಡಿರದ ಗುಲಾಬಿಯನ್ನ; ನೀನೇ ಏನು, ಜಗತ್ತಿನಲ್ಲಿ ಯಾರೂ ಕಂಡು ಕೇಳರಿಯದ ಗುಲಾಬಿಯನ್ನ, ರಂಬೆ ಊರ್ವಶಿಯರಿಗೂ ದಕ್ಕಿರದ ಗುಲಾಬಿಯನ್ನ, ನಿನಗಾಗಿಯೇ ಮಾಡಿಸಿದ ಕೋಟಿ ರೂಪಾಯಿ ಬೆಲೆಯ ಕಾಮನಬಿಲ್ಲಿನ ಬಣ್ಣಗಳ ಡೈಮಂಡ್ ಗುಲಾಬಿಯನ್ನ' ಉಮೇದಿನಿಂದ ಹೇಳಿದ್ದ.

'ತಡ ಮಾಡುವೆಯೇಕೆ ಕೊಡು ಬೇಗ ಮತ್ತೆ' ಅವಳ ಮಾತುಗಳಲ್ಲೂ ಉಮೇದು ಹುಟ್ಟಿತ್ತು. ಅವನು ಪುಟ್ಟ ಬ್ಯಾಗಿನಿಂದ ಆ ಗುಲಾಬಿಯನ್ನು ತೆಗೆದು ಅವಳ ಕೈಗಿತ್ತ. ಗುಲಾಬಿಯ ಬಣ್ಣಗಳು ಅವಳ ಮುಖದ ಮೇಲೆ ಚಲ್ಲಿ ಅಪೂರ್ವ ಚೆಲುವು ಸೃಷ್ಟಿಯಾಗಿತ್ತು. ಮುಸ್ಸಂಜೆಯ ಸಮುದ್ರದ ಅಲೆಗಳಲ್ಲಿ ಕಾಮನಬಿಲ್ಲು ಕುಣಿದಾಡಿತ್ತು. ಕ್ಷಣ ಸಮಯದಲ್ಲೇ ಊರ್ಮಿಳಾ ಎನ್ನುವ ಆ ಚೆಲುವೆ 'ಏಯ್ ಶೇಟು, ಇದು ಸುಂದರವಾದ ಡೈಮಂಡ್ ಗುಲಾಬಿಯಿರಬಹುದು, ಆದರೆ ಇದಕ್ಕೆ ಜೀವವೆಲ್ಲಿದೆ? ಸುವಾಸನೆಯೆಲ್ಲಿದೆ? ನೀನು ನನ್ನ ಮೋಸಗೊಳಿಸಿದೆ. ನಿನ್ನೊಂದಿಗೆ ನಾನು ಡ್ಯಾನ್ಸ್ ಮಾಡಲಾರೆ ಹೋಗು ಮೂರ್ಖ' ಎಂದು ಡೈಮಂಡ್ ಗುಲಾಬಿಯನ್ನು ತಾಜ್ ಹೋಟೆಲಿನ ಕಡೆ ಎಸೆಯುತ್ತಾಳೆ. ಕ್ಷಣಾರ್ಧದಲ್ಲಿ ತಾಜ್ ಹೋಟೆಲ್ ಸ್ಫೋಟಗೊಂಡು ಅಗಾಧವಾಗಿ ಉರಿಯಲಾರಂಭಿಸುತ್ತದೆ. ಇಬ್ಬರ ಕನಸುಗಳೂ ಕಳಚಿಕೊಳ್ಳುತ್ತವೆ.